**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ ಸಿ ಸಂಃ 228/2020**

| | | |
|---|---|---|
| ಸಾಕ್ಷಿಯ ಹೆಸರುಃ | ಮಂಜುನಾಥ ವಿ ಜೆ | ಫ್ರಾಸಾಃಃ 5 |
| ತಂದೆ ಹೆಸರುಃ | ಜಯಸ್ವಾಮಿ | ಚಾಸಾಃಃ 6 |
| ವಯಸ್ಸುಃ | 39 ವರ್ಷ | ಪ್ರಮಾಣೀಕರಿಸಿದ<br>ದಿಃ 19.01.2026. |
| ಉದ್ಯೋಗಃ | ಹೆಚ್.ಸಿ-115, ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆ | |
| ವಾಸ ಸ್ಥಳಃ | ಹುಣಸೂರು. | |

**ಮುಖ್ಯ ವಿಚಾರಣೆಃ** ಮಾನ್ಯ **ಸಸಅ ರಿಂದಃ**

ನಾನು ಸೆಪ್ಟಂಬರ್-2018 ರಿಂದ ಜುಲೈ-2022 ರವರೆಗೆ ಬೆಟ್ಟದಪುರ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿನಾಂಕಃ 01.02.2020 ರಂದು ಬೆಳಿಗ್ಗೆ 8.00 ಗಂಟೆ ಸಮಯದಲ್ಲಿ ಚಾಸಾ- 17 ರವರು ಇಲಾಖಾ ಜೀಪಿನಲ್ಲಿ ನಾನು ಮತ್ತು ಚಾಸಾ - 5 ರವರೊಂದಿಗೆ ಠಾಣಾ ಮೊಕದ್ದಮೆ ಸಂ.135/2019 ಮತ್ತು 136/2019 ರಲ್ಲಿ ಆರೋಪಿ ಮತ್ತು ಮಾಲು ಪತ್ತೆಯ ಬಗ್ಗೆ ಗಸ್ತಿಗೆ ತೆರಳಿದ್ದು, ಬೆಟ್ಟದಪುರ ಟೌನ್ ಗೊರಹಳ್ಳಿ, ಸುರಗಳ್ಳಿ,ಅಲಗನಹಳ್ಳಿ ಗ್ರಾಮಗಳಲ್ಲಿ ಗಸ್ತು ಮಾಡಿ ಬೆಳಿಗ್ಗೆ 9-20 ಗಂಟೆ ಸಮಯದಲ್ಲಿ ಅಲಗನಹಳ್ಳಿ ಗ್ರಾಮದ ಸರ್ಕಲ್ ಬಳಿ ಗಸ್ತಿನಲ್ಲಿ ಇರುವಾಗ ಚಾಸಾ - 17 ರವರಿಗೆ ಬಾತ್ಮಿದಾರರಿಂದ ಬಂದ ದೂರವಾಣಿ ಕರೆ ಮೇರೆಗೆ ಅಲಗನಹಳ್ಳಿ ಗ್ರಾಮದ ಸರ್ಕಲ್ ಬಳಿ ಒಬ್ಬ ಆಸಾಮಿಯು ಭಾರತ್ ಕಂಪನಿಯ ಗ್ಯಾಸ್ ನ 3 ಸಿಲಿಂಡರ್ ಗಳನ್ನು ಮಾರಾಟ ಮಾಡುತ್ತಿದಾದನೆ ಎಂದು ತಿಳಿಸಿದ ಮೇರೆಗೆ ನಾನು, ಚಾಸಾ - 5 ಮತ್ತು ಚಾಸಾ - 17 ರವರು 9-30 ಗಂಟೆ ಸಮಯದಲ್ಲಿ ಸದರಿ ಆಸಾಮಿಯನ್ನು ಹಿಡಿಯಲಾಗಿ ಚಾಸಾ- 17 ರವರು ಆತನನ್ನು ವಿಚಾರಿಸಲಾಗಿ ಆತ ತಡವರಿಸುತ್ತ ಒಂದು

ಬಾರಿ ನನ್ನ ಹೆಸರು ಪ್ರಕಾಶ ಎಂದು, ಮತ್ತೊಂದು ಬಾರಿ ಪ್ರದೀಪ ಅಲಿಯಾಸ್ ಪ್ರದಿ ಬಿನ್ ನಾಗರಾಜು, 27 ವರ್ಷ, ಕಣಗಾಲು ಗ್ರಾಮ, ಪಿರಿಯಾಪಟ್ಟಣ ತಾಲೂಕು ಎಂದು ತಿಳಿಸಿರುತ್ತಾನೆ. ಆತನ ಬಳಿ ಇದ್ದ ಸಿಲಿಂಡರ್ ಗಳ ಬಗ್ಗೆ ವಿಚಾರಿಸಲಾಗಿ, ಸರಿಯಾದ ಮಾಹಿತಿ ನೀಡದೇ ಇದ್ದರಿಂದ ಆತನನ್ನು ಮತ್ತು ಸಿಲಿಂಡರ್ ಗಳನ್ನು ಬೆಳಿಗ್ಗೆ 10-00 ಗಂಟೆಗೆ ಠಾಣೆಗೆ ತಂದು ಕೂಲಂಕೂಶವಾಗಿ ವಿಚಾರಣೆ ಮಾಡಲಾಗಿ ಆತನು ತಾನು ದುಷ್ಚಟಗಳಿಗೆ ಒಳಪಟ್ಟಿದ್ದು, ಖರ್ಚಿಗಾಗಿ ದಿನಾಂಕ 07-09-2019 ರಂದು ಠಾಣಾ ಸರಹದ್ದು ಚಿಕ್ಕನೇರಳೇ ಗ್ರಾಮದ ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕರ ಕೊಠಡಿಯ ಬಾಗಿಲ ಬೀಗವನ್ನು ರಾತ್ರಿ ಸುಮಾರು 11-30 ಗಂಟೆ ಸಮಯದಲ್ಲಿ ಸ್ಕ್ರೂ ಡ್ರೆವರ್ ನಿಂದ ಮೀಟಿ ಒಳ ಪ್ರವೇಶಿಸಿ ಕಛೇರಿಯಲ್ಲಿ ಇದ್ದ ಒಂದು ಭಾರತ್ ಗ್ಯಾಸ್ ಕಂಪನಿಯ ಸಿಲಿಂಡರ್ ತೆಗೆದುಕೊಂಡು ಹೋಗಿರುವುದಾಗಿ ಮತ್ತು ದಿಃ 08.09.2019 ರಂದು ರಾತ್ರಿ ಸುಮಾರು 11-45 ಗಂಟೆ ಸಮಯದಲ್ಲಿ ಠಾಣಾ ಸರಹದ್ದು ವಡ್ಡರ ಬೈಲಕುಪ್ಪೆ ಗ್ರಾಮದ ಸರ್ಕಾರಿ ಶಾಲೆಯ ಅಕ್ಷರ ದಾಸೋಹ ಕಟ್ಟಡ ಮತ್ತು ಅದರ ಪಕ್ಕದಲ್ಲಿ ಇದ್ದ ಅಂಗನವಾಡಿ ಕಟ್ಟಡದ ಬಾಗಿಲನ್ನು ಮೀಟಿ ಒಳ ಪ್ರವೇಶಿಸಿ ಸದರಿ ಕಟ್ಟಡಗಳಲ್ಲಿ ಇದ್ದ 2 ಭಾರತ್ ಗ್ಯಾಸ್ ಕಂಪನಿಯ ಸಿಲಿಂಡರ್ ಮತ್ತು ಒಂದು ಚೀಲ ಅಕ್ಕಿ ಹಾಗೂ ಒಂದು ಹಾಲಿನ ಪೌಡರಿನ ಪ್ಯಾಕೇಟನ್ನು ತೆಗೆದುಕೊಂಡು ಹೋಗಿರುವುದಾಗಿ ತಿಳಿಸಿರುತ್ತಾನೆ. ಅವುಗಳಲ್ಲಿ ಒಂದು ಚೀಲ ಅಕ್ಕಿ ಹಾಗೂ ಹಾಲಿನ ಪೌಡರನ್ನು ಯಾರಿಗೋ ಮಾರಾಟ ಮಾಡಿ ಅದರಿಂದ ಬಂದ ಹಣವನ್ನು ಖರ್ಚು ಮಾಡಿರುವುದಾಗಿ ತಿಳಿಸಿರುತ್ತಾನೆ ಮತ್ತು ಬೀಗವನ್ನು ಮುರಿಯಲು ಬಳಸಿದ್ದ ಸ್ಕ್ರೂ ಡ್ರೈವರನ್ನು ತನ್ನ ಜೇಬಿನಲ್ಲಿ ಇರಿಸಿಕೊಂಡಿದ್ದು, 3 ಗ್ಯಾಸ್ ಸಿಲಿಂಡರ್ ಮತ್ತು ಒಂದು ಸ್ಕ್ರೂ ಡ್ರೈವರನ್ನು ಪಂಚರ ಸಮಕ್ಷಮ ಚಾಸಾ - 17 ರವರು ಅಮಾನತು ಮಹಜರ್ ಮೂಲಕ ವಶಪಡಿಸಿಕೊಂಡಿರುತ್ತಾರೆ. ಸದರಿ ಗ್ಯಾಸ್ ಸಿಲಿಂಡರ್ ಗಳು ಮತ್ತು ಸ್ಕ್ರೂ ಡ್ರೈವರನ್ನು ಹಾಗೂ ಆರೋಪಿಯನ್ನು ನಾನು ನೋಡಿದ್ದು, ಮತ್ತೆ ನೋಡಿದರೆ ಗುರುತಿಸುತ್ತೇನೆ. ಆ ಬಗ್ಗೆ ನಾನು ನನ್ನ ಹೇಳಿಕೆ ನೀಡಿರುತ್ತೇನೆ.

3. ಸಾಕ್ಷಿ ಈ ಪ್ರಕರಣದ ಎರಡು ಸಿಲಿಂಡರ್ ಗಳನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುಮಾ – 2 ಮತ್ತು 3 ಎಂದು ಗುರುತಿಸಲಾಗಿದೆ. ಸಾಕ್ಷಿ ಸ್ಕ್ರೂ ಡ್ರೈವರನ್ನು ನೋಡಿ ಗುರುತಿಸಿದ್ದು, ಅದನ್ನು ಮುಮಾ – 4 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಕೆ.ಎಸ್ ವಕೀಲರಿಂದಃ</u>**

4. ನಾನು ದಿಃ 01.02.2020 ರಂದು ಠಾಣೆಯಲ್ಲಿ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಗಸ್ತಿಗೆ ಹೋಗುವಾಗ ಠಾಣಾ ದಿನಚರಿಯಲ್ಲಿ ನಾನು ಬರೆದಿಲ್ಲ, ಆದರೆ ಚಾಸಾ – 17 ರವರು ಬರೆದಿದ್ದರು. ಕಳ್ಳತನ ಆಗಿದೆ ಎಂದು ದಿಃ 07.09.2019 ರಂದು ಮಾಹಿತಿ ಬಂದಿದ್ದು, ಅದರಂತೆ ಪ್ರಕರಣ ದಾಖಲಾಗಿರುತ್ತದೆ. ಠಾಣೆಯನ್ನು ಬೆಳಿಗ್ಗೆ 8–00 ಗಂಟೆಗೆ ಗಸ್ತಿಗೆ ಎಂದು ಬಿಟ್ಟಿರುತ್ತೇವೆ. ನಮ್ಮ ಠಾಣೆಯಿಂದ ಅಲಗನಹಳ್ಳಿ 8 ಕಿ.ಮೀ ಅಂತರ ಇದೆ. ಅಲಗನಹಳ್ಳಿ ಗ್ರಾಮದಲ್ಲಿ ಸುಮಾರು 3 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇದೆ. ಅಲಗನಹಳ್ಳಿ ಸರ್ಕಲ್ ಮುಖ್ಯ ರಸ್ತೆಯಲ್ಲಿ ಗಸ್ತು ಮಾಡುತ್ತಿದ್ದೆವು. ಆರೋಪಿ ನಿಂತಿದ್ದ ಸ್ಥಳದ ಸುತ್ತ ಮುತ್ತ ಅಂಗಡಿಗಳು ಇವೆ. ಸದರಿ ಸರ್ಕಲ್ ನಲ್ಲಿ ಯಾವಾಗಲೂ ಜನಸಂದಣಿ ಇರುತ್ತದೆ ಎಂದರೆ, ಸಾಕ್ಷಿಯು ಬೆಳಿಗ್ಗೆಯಾದರಿಂದ ಜನಸಂದಣಿ ಕಡಿಮೆ ಇತ್ತು ಎಂದು ನುಡಿಯುತ್ತಾರೆ. ಆರೋಪಿಯನ್ನು ನಾವು ಮೂರು ಜನ ಒಟ್ಟಿಗೆ ನೋಡಿದ್ದೆವು. ಆರೋಪಿ ಮತ್ತು ಆತನ ಹಸೆರು ಮೊದಲೇ ಗೊತ್ತಿತ್ತಾ ಎಂದರೆ, ಸಾಕ್ಷಿಯು ಅನುಮಾನಾಸ್ಪದ ವ್ಯಕ್ತಿ ಸಿಲಿಂಡರ್ ಮಾರಾಟ ಮಾಡುತ್ತಿದ್ದಾರೆ ಎಂದು ಬಾತ್ಮಿ ಬಂದಿತ್ತು ಹಾಗಾಗಿ ಗೊತ್ತಾಯಿತು ಎಂದು ನುಡಿಯುತ್ತಾರೆ. ಬಾತ್ಮಿ ಬಂದ ಬಗ್ಗೆ ಠಾಣೆಯಲ್ಲಿ ದಾಖಲೆ ಇರುವುದಿಲ್ಲ. ಅದನ್ನು ಈಗಾಗಲೇ ಮುಮಾ – 2 ಎಂದು ಗುರುತಿಸಲಾಗಿದೆ. ಸ್ಥಳಕ್ಕೆ ಹೋದಾಗ ಸಾರ್ವಜನಿಕರು ಎಷ್ಟು ಜನ ಇದ್ದರು ಎಂದು ಗೊತ್ತಿಲ್ಲ. ಖಾಲಿ ಸಿಲಿಂಡರ್ 14–15 ಕೆ.ಜಿ ತೂಕ ಇರುತ್ತದೆ. ನಾವು ವಿಚಾರಿಸುವಾಗ ಆರೋಪಿ ಓಡಿ ಹೋಗಲು ಪ್ರಯತ್ನಿಸಿರಲಿಲ್ಲ. ಸಿಲಿಂಡರ್ ವಶಪಡಿಸಿಕೊಂಡ ಬಗ್ಗೆ ಅಮಾನತು ಮಹಜರ್ ನಲ್ಲಿ ಸಹಿ ಮಾಡಿಲ್ಲ, ಕಾರಣ ಆರೋಪಿತ ಸಮಂಜಸವಾದ ಉತ್ತರ ನೀಡಿರಲಿಲ್ಲ, ಆತನನ್ನು ಠಾಣೆಗೆ

ಕರೆದುಕೊಂಡು ಬಂದು ವಿಚಾರಣೆ ಮಾಡಿದಾಗ ತಿಳಿಸಿದ್ದರು, ಹಾಗಾಗಿ ಠಾಣೆಯಲ್ಲಿ ಅಮಾನತು ಮಹಜರ್ ಮಾಡಿದೆವು ಎಂದು ನುಡಿಯುತ್ತಾರೆ. ಠಾಣೆಗೆ ಆರೋಪಿತನನ್ನು ಕರೆದುಕೊಂಡು ಬಂದ ನಂತರ ಪುನಃ ಸ್ಥಳಕ್ಕೆ ಭೇಟಿ ನೀಡಿ ಅಮಾನತು ಮಹಜರ್ ಮಾಡಿಲ್ಲ. ಕೃತ್ಯ ನಡೆದ ಸ್ಥಳಕ್ಕೆ ನಾನು ಭೇಟಿ ನೀಡಿದ ಬಗ್ಗೆ ನೆನಪಿಲ್ಲ. ಅಮಾನತು ಮಹಜರು ಮಾಡಿದ ಬಗ್ಗೆ ಮುದ್ದೆಮಾಲಿನ ಮೇಲೆ ನನ್ನ ಸಹಿ ಇಲ್ಲ. ಆ ರೀತಿ ಸಹಿ ಮಾಡಲು ನನಗೆ ತೊಂದರೆ ಇರಲಿಲ್ಲ. ಆರೋಪಿತನನ್ನು ಮಾಲು ಸಮೇತ ಹಿಡಿದುಕೊಂಡ ಸ್ಥಳದಲ್ಲಿ ಮತ್ತು ಠಾಣೆಯಲ್ಲಿ ಪೋಟೋ ವಿಡಿಯೋ ಮಾಡಿದ ಬಗ್ಗೆ ನನಗೆ ನೆನಪಿಲ್ಲ. ಮುಮಾ – 4ರ ಸ್ಕ್ರೂ ಡ್ರೈವರ್ ವಶಪಡಿಸಿಕೊಂಡ ಬಗ್ಗೆ ನಾನು ಸಹಿ ಮಾಡಿಲ್ಲ. ನಾನು ಅಮಾನತು ಮಹಜರ್ ಕಾಲಕ್ಕೆ ಹಾಜರಿದ್ದರೆ ನಾನು ಅದಕ್ಕೆ ಸಹಿ ಮಾಡುತ್ತಿದ್ದೆ, ಆದ್ದರಿಂದ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಕಳ್ಳತನ ಮಾಡಿಲ್ಲ, ಸಿಲಿಂಡರ್ ಗಳನ್ನು ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಿಜವಾದ ಆರೋಪಿ ಸಿಗದಿದ್ದರಿಂದ, ಈ ಪ್ರಕರಣದ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾರಿಗೆ ಅಕ್ಕಿ ಮತ್ತು ಹಾಲಿ ಪೌಡರ್ ಮಾರಾಟ ಮಾಡಿದ್ದಾರೆ ಎಂದು ವಿಚಾರಿಸಿಲ್ಲ. ಈ ಪ್ರಕರಣದ ಕೃತ್ಯದಲ್ಲಿ ಆರೋಪಿ ಭಾಗಿ ಆಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆ:ಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**